International Journal for Multidisciplinary Research (IJFMR)

E-ISSN: 2582-2160 ● Website: www.ijfmr.com ● Email: editor@ijfmr.com

# ಜಿ.ಎಸ್.ಶಿವರುದ್ರಪ್ಪನವರ ಕವಿತೆಗಳಲ್ಲಿ ಪ್ರೀತಿ ಮೀಮಾಂಸೆ

**ಡಾ. ಮುಮ್ತಾಜ್ ಬೇಗಂ**

ಸಹ ಪ್ರಾಧ್ಯಾಪಕರು, ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗ, ಎಸ್.ಕೆ.ಎನ್.ಜಿ. ಸರ್ಕಾರಿ ಪ್ರಥಮದರ್ಜೆ ಕಾಲೇಜು, ಗಂಗಾವತಿ–583227. ಜಿ:ಕೊಪ್ಪಳ,

**ಂಛಣಡಿಚಿಛಿಣ**

ಖಿಟಿ ಣಹಜ ಠಿಂಜಣಡಿ ಂಜಿ ಣಹಜ ಟಿಚಿಣಟಂಟಿಚಿಟ ಠಿಂಜಣ ಉ.ಖ. ಖುತಚಿಡಿಣಜಡಿಚಿಠಿಠಿಚಿ (ಉಖಖ), 'ಟಂತಜ' ಜಂಥ ಟಿಂಣ ಡಿಜಟಚಿಟಿ ರಿಣ್ಣ ಠಿಜಢಿಂಟಿಚಿಟ ಟಂತಜ, ಛಣ್ಣ ಜಥಠಿಚಿಟಿಥ ಿಟಿಣಂ ಣಟಿತಜಢಿಚಿಟ ಟಂತಜ ಚಿಟಿಜ ಣಹಜ ಠಿಂತಿಜಡಿ ಣಂ ಛಣ್ಣಟಜ ಟುಜಿಜ.

ಗಿಚಿಡಿಣಂಣ ಜುಟಜಟ್ಟಿಂಟಿ ಂಜಿ ಟಂತಜ ಿಟಿ ಉಖಖ ಠಿಂಜಣಡಿಥಿ:: ಆಥಠಿಣಜ ಣಹಜ ಛಣಣಜಡಿಟಿಥ ಂಜಿ ಣಹಜ ತಿಂಡಿಟಜ, ಿಜ ಛಜಟುಜತಥ ಣಚಿಣ ಟಂತಜ ಿ ಣಹಜ ಠಿಂತಿಜಡಿ ಣಚಿಣ ರುತಥ ಛಿಂಂಟಟಿಥ ಣಂ ಟುಜಿಜ ಚಿಟಿಜ ಛಿಡಿಜಚಿಣಥ ಿಂಠಿಜ.

ಖಿಜ ಟಚಿಟಿ ಿಜಜಚಿ ಂಜಿ ಘ ಠಿಂಜಣಡಿಥಿ ಿ ಣಹಜ ಟಂತಜ ಂಜಿ ಿಣಟಚಿಟಿಣಥಿ ಣಚಿಣ ಣಡಿಚಿಛಿಛಿಜಟಿಥ ಣಹಜ ತಿಚಿಟಟಥ ಂಜಿ ಛಿಛಿಣಜ, ಛಿಡಿಜಜಜ, ಚಿಟಿಜ ಡಿಜಟುರುಂಟಿ ಚಿಟಿಜ ಣಚಿಣ ಟಚಿಟಿ ಿಂಣಟಜ ಟಂತಜ ಟಚಿಟಿ. ಓಂಣ ಂಟಿಟಥಿ ಿಣಟಚಿಟಿ ಛಜುಟಿಂ, ಛಣ್ಣ ಚಿಟಂ ಣಹಜ ಟಂತಜ ಜಿಂಡಿ ಣಹಜ ಛಿಂಟಂಿಚಿಟುಂಟ್ಟುಂ, ಛಜಚಿಣಣಥಿ, ಚಿಟಿಜ ಜಟಿಣಡಿಜ ಟುತುಟಿಂ ಛಜುಟಿಂ ಂಜಿ ಟಿಚಿಣಣಡಿಜ ಡಿಥಂಟಿಚಿಣಜ ಿಟಿ ಘ ಠಿಂಜಢ

ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರು ಅವರು ಕನ್ನಡ ಸಾಹಿತ್ಯ ಲೋಕದ ಅಗ್ರಗಣ್ಯ ಬರಹಗಾರರಲ್ಲಿ ಒಬ್ಬರಾಗಿದ್ದಾರೆ. ನಡೆ ನುಡಿಯನ್ನು ಒಂದಾಗಿಸಿಕೊಂಡು ಬದುಕಿದವರು. ಸೃಜನಶೀಲ ವ್ಯಕ್ತಿತ್ವದ ಮೂಲಕ ಸಾಹಿತ್ಯ ಮತ್ತು ಸಾಂಸ್ಕೃತಿಕ ಘನತೆಯನ್ನು ಹೆಚ್ಚಿಸಿಕೊಂಡವರು. ಸಾಮಾಜಿಕ ಬದ್ಧತೆ ಮತ್ತು ಬದುಕಿನಲ್ಲಿ ಎದುರಾದ ಕ್ಷಣಗಳನ್ನು ತುಂಬಾ ಕ್ರಿಯಾಶೀಲವಾಗಿ ನಿಭಾಯಿಸಿಕೊಂಡು ಬಂದವರು. ಆದ್ದರಿಂದ ಅವರನ್ನು ಸಾಮಾಜಿಕ ಬದುಕಿನ ದರ್ಶಕ ಪ್ರಜ್ಞೆ ಎಂದರೆ ಅತಿಯೋಶಕ್ತಿಯಾಗಲಾರದು.

ಕಾವ್ಯ ಎನ್ನುವುದು ಸಮಕಾಲೀನ ಸಮಾಜದ ತುಡಿತ, ಗೊಂದಲ, ಸಂಕೀರ್ಣತೆಯನ್ನು ಸೂಕ್ಷ್ಮಗ್ರಹಿಯ ಮೂಲಕ ಸರಳ ಅಭಿವ್ಯಕ್ತಿಯಲ್ಲಿ ರಚನೆಗೊಂಡ ಕವಿತೆಗಳಾಗಿವೆ. ಇವರು ಸಮಗಾನದಿಂದ ಅಗ್ನಿಪರ್ವತದವರೆಗೂ ಸುಮಾರು ಐದು ದಶಕಗಳಿಗೂ ಅಧಿಕವಾಗಿ ಕಾವ್ಯಾಭಿವ್ಯಕ್ತಿಯಲ್ಲಿ ತೊಡಗಿಸಿಕೊಂಡವರು. ನವೋದಯ ಕಾಲಘಟ್ಟದ ಸತ್ವವನ್ನು ಕರಗತ ಮಾಡಿಕೊಂಡು ಕಾವ್ಯ ಪ್ರವೇಶಿಸಿದವರು. ನವೋದಯ, ನವ್ಯ, ದಲಿತ–ಬಂಡಾಯವೆನ್ನದೇ ಎಲ್ಲಾ ಕಾಲಘಟ್ಟದಲ್ಲಿ ಕಾವ್ಯದ ನಿರಂತರತೆಯನ್ನು ಕಾಪಾಡಿಕೊಂಡು ಬಂದವರು. ಬದುಕಿನ ಬಗೆಗಿನ ಶ್ರದ್ಧೆ ಮತ್ತು ಜೀವನಪ್ರೀತಿ, ಚಿಂತನಾಶೀಲ ಮನಸ್ಸು, ಪ್ರಕೃತಿಪ್ರೀತಿ, ನೆಲದ ಅಭಿಮಾನ, ಸಂಸ್ಕೃತಿಯ ಸಾರವನ್ನು ವಿಶಿಷ್ಟ ನೆಲೆಯಲ್ಲಿ ಕಟ್ಟಿಕೊಟ್ಟಿರುವ ಕವಿ.

ಬದುಕನ್ನು ಅಗಾಧವಾಗಿ ಪ್ರೀತಿಸುವ ಕವಿ, ತಾನು ಕಂಡುಂಡ ನೋವು ನಲಿವುಗಳನ್ನು ಬದುಕಿನ ಮೂಸೆಯಲ್ಲಿ ಕಾಯಿಸಿ, ಕರಗಿಸಿ, ಎರಕ ಹೊಯ್ದು ಪದಕಟ್ಟುವ ಕಲೆಗಾರಿಕೆ ಅವರಿಗೆ ಒಲಿದಿರುವ ಅದ್ಭುತ ಅಂತಃಶಕ್ತಿಯಾಗಿದೆ. ಇವರ ರಚನೆಗಳಲ್ಲಿ ಪ್ರೀತಿ ಎಂದರೆ ಕೇವಲ ಭಾವನೆಯಲ್ಲ ಬದುಕಿನ ಪ್ರತಿಯೊಂದು ಜವಾಬ್ದಾರಿ, ಹೊಣೆಗಾರಿಕೆ, ಆತ್ಮಾನುಸಂಧಾನದ ಅನುಭವ ಎನ್ನುವ ಅರ್ಥದಲ್ಲಿ ಪ್ರೀತಿಯನ್ನು ಕಾಣಬಯಸುತ್ತಾರೆ.

ಜಿ.ಎಸ್.ಎಸ್. ಅವರ ಕವಿತೆಗಳಲ್ಲಿ ಪ್ರೀತಿಯ ಮೀಮಾಂಸೆಯ ಸ್ವರೂಪ ವಿಶಾಲವಾದದ್ದು. ಪ್ರೀತಿ ಎಂದರೇನು? ನಿಜ ಪ್ರೀತಿಯ ಸ್ವರೂಪವೇನು? ಪ್ರೀತಿ ಸ್ವಾರ್ಥವೇ? ತ್ಯಾಗವೇ? ಇತ್ಯಾದಿ ಅಂಶಗಳನ್ನು ಚರ್ಚೆಗೆ ಒಳಮಾಡುವುದು ಮೀಮಾಂಸೆಯಾಗಿದೆ. ಈ ಹಿನ್ನೆಲೆಯಲ್ಲಿ ಜಿಎಸ್ಎಸ್ ಅವರ ಕವಿತೆಗಳಲ್ಲಿ ಪ್ರೀತಿ ಮೀಮಾಂಸೆಯ ಹುಡುಕುವುದು ಈ ಲೇಖನದ ಉದ್ದೇಶವಾಗಿದೆ. ಪ್ರೀತಿಯ ಕುರಿತು ಇವರ ಕವಿತೆಗಳು ಆಳವಾದ ವಿಚಾರ, ಸೂಕ್ಷ್ಮತೆಗಳು ತಾರ್ಕಿಕತೆಯನ್ನು ಒಳಗೊಂಡಿರುವ ಬಗೆಯೇ ಆಗಿದೆ.

ಕಾವ್ಯ ಮೀಮಾಂಸೆ ಕನ್ನಡ ಸಾಹಿತ್ಯದ ಓದುಗರಿಗೆ ಪರಿಚಿತ. ಆದರೆ ಪ್ರೀತಿ ಮೀಮಾಂಸೆ ಅಂತರ್ಗತವಾದದ್ದು. ಜೀವನದ ಹಲವು ಮುಖಗಳನ್ನು ಪ್ರೀತಿ ಅಭಿವ್ಯಕ್ತಿಸುತ್ತದೆ. ಕಾವ್ಯ ಮೀಮಾಂಸೆ ಮತ್ತು ಪ್ರೀತಿ ಮೀಮಾಂಸೆಯ ಕುರಿತಾದ ಚರ್ಚೆಯಲ್ಲಿ ಗಮನಿಸಬೇಕಾದ ಮುಖ್ಯ ಅಂಶಗಳೆಂದರೆ ಕಾವ್ಯ ಮೀಮಾಂಸೆ ಕವಿ ಮತ್ತು ಸಹೃದಯರ ಜೀವನವನ್ನು ಕುರಿತಾದ ಲಿಖಿತ ಪರಂಪರೆಯ ದಾಖಲೆ; ಪ್ರೀತಿ ಮೀಮಾಂಸೆ ಸಾಮಾನ್ಯ ವ್ಯಕ್ತಿಯ ಜೀವನದ ಅಲಿಖಿತ ಪರಂಪರೆಯ ದಾಖಲೆ. ಅಕ್ಷರ ಗೊತ್ತಿರದ ಜನಪದರು ವೈಯಕ್ತಿಕ ಬದುಕಿನ ಪ್ರೀತಿ, ಪ್ರೇಮ, ಸುತ್ತಲಿನ ಸಮಾಜ, ಪ್ರಕೃತಿ, ಪರಿಸರದೊಳಗಿನ ಸತ್ಯ ಸೌಂದರ್ಯಗಳನ್ನು ಮೌಖಿಕ ಪರಂಪರೆಯಲ್ಲಿ ಕಟ್ಟಿಕೊಟ್ಟಿರುವುದನ್ನು ಗಮನಿಸಬಹುದು. ಪ್ರೀತಿಯ ಮೀಮಾಂಸೆ ಜೀವ–ಭಾವಗಳ ಅಭಿವ್ಯಕ್ತಿ, ಕಾವ್ಯ ಮತ್ತು ಪ್ರೀತಿಯ ನಡುವೆ ಒಂದು ಅವಿನಾಭಾವ ಸಂಬಂಧವನ್ನು ಹೊಂದಿದೆ. ಜೀವಪರ ನಿಲುವು, ಅಹಿಂಸೆ, ಶಾಂತಿಯನ್ನು ಬೋಧಿಸುವ ಕ್ರಮವನ್ನು ಪ್ರೀತಿಯ ಮೀಮಾಂಸೆಯ ಭಾಗವಾಗಿ ನೋಡುತ್ತೇವೆ.

ಜಿಎಸ್ಎಸ್ ಅವರ ಕವಿತೆಗಳಲ್ಲಿ ಜೀವನಪ್ರೀತಿ, ನೆಲದ ಪ್ರೀತಿ, ಪ್ರಕೃತಿ ಪ್ರೀತಿ, ತಾಯ್ತನದ ಪ್ರೀತಿ ಹೀಗೆ ಹಲವು ಆಯಾಮಗಳಲ್ಲಿ ಪ್ರೀತಿಯ ಮೀಮಾಂಸೆಯನ್ನು ಚರ್ಚಿಸಲು ಸಾಧ್ಯತೆಗಳಿವೆ.

ಪ್ರೀತಿ ಇಲ್ಲದ ಮೇಲೆ
ಹೂವು ಅರಳಿತು ಹೇಗೆ?
ಮೋಡ ಕಟ್ಟಿತು ಹೇಗೆ?
ಹನಿಯೊಡೆದು ಕೆಳಗಿಳಿದು
ನೆಲಕ್ಕೆ ಹಸಿರು ಮೂಡಿತು ಹೇಗೆ?

ಸಮಾಜದಲ್ಲಿ ಮೌಲ್ಯಗಳು ಅಧಃಪತನಕ್ಕಿಳಿಯುತ್ತಿರುವ ವರ್ತಮಾನದಲ್ಲಿ ಕಾರಣ ಹುಡುಕಲು ಹೊರಟರೆ ಸಾವಿರ ಉತ್ತರ ದೊರೆಯಬಹುದು. ಆದರೆ ಪ್ರೀತಿಯೊಂದು ಇಲ್ಲದಿದ್ದರೆ ಮನುಷ್ಯ ಬದುಕು ಅಧೋಗತಿಗೆ ಕಾರಣವಾಗುತ್ತದೆ. ಪ್ರೀತಿಯೊಂದು ಮನುಷ್ಯನ ಎದೆಗೂಡಿನಲ್ಲಿ ಇಲ್ಲದೇ ಹೋದರೆ ಸಂಶಯದ ಗಡಿಗಳುದ್ದಕ್ಕೂ ಸಿಡಿಮದ್ದುಗಳ ಕದನ ನಿಂತೀತು ಹೇಗೆ? ಜಾತಿ, ಮತ, ಭಾಷೆ, ಬಣ್ಣಗಳ ಗೋಡೆ ನಡುವೆ ನರಳುವುದು ತಪ್ಪಿತು ಹೇಗೆ? ಎನ್ನುವ ಪ್ರಶ್ನೆಗಳು ಬದುಕಿನ ಪ್ರೀತಿ ವಿಶ್ವಾಸದ ಮೌಲ್ಯಗಳ ಬಗ್ಗೆ ಮಾತಾಡುತ್ತವೆ. ಕವಿತೆಗಳಲ್ಲಿ ಮನುಷ್ಯನ ಸ್ವಾರ್ಥ, ವಂಚನೆ, ದ್ವೇಷ, ಅಸೂಯೆ ತುಂಬಿಕೊಂಡು ಬರುಡಾಗುತ್ತಿರುವ ಹೃದಯದ ಕುರಿತು ಕವಿಯ ಕಾಳಜಿ ಕಾಡುತ್ತದೆ. ಹೃದಯದಲ್ಲಿ ಪ್ರೀತಿ ಚಿಗುರೊಡೆಯಬೇಕು, ಮರವಾಗಿ ದಿಗಂತಕ್ಕೆರಿ ವಿಶ್ವವ್ಯಾಪಿಸಬೇಕು. ಆಗ ಮಾತ್ರ ನಿಜ ಅರ್ಥದಲ್ಲಿ ಮನುಷ್ಯರಾಗುತ್ತೇವೆ. ಇಲ್ಲದಿದ್ದರೆ ಬದುಕು ಯಾಂತ್ರಿಕವಾಗಿ ಬಿಡುತ್ತದೆ ಎಂಬ ಆತಂಕ ಕವಿಗಿದೆ.

ಪ್ರೀತಿ ಇಲ್ಲದೇ ಹೋದರೆ ಪದ ಜೋಡಣೆ ಆಗುವುದೇ ವಿನಾಃ ಕವಿತೆ ಆಗಲಾರದು. ಪ್ರಕೃತಿ ತನ್ನೊಡಲಲ್ಲಿ ಅಗಾಧ ಪ್ರೀತಿಯನ್ನಿಟ್ಟು ಸಾಗುತ್ತಿರುವಾಗ ಮನುಷ್ಯ ಪ್ರಕೃತಿ ವಿರುದ್ಧದ ಚಟುವಟಿಕೆಗಳನ್ನು ಕೈಗೊಂಡಾಗ ಪ್ರಕೃತಿಯ ಮುನಿಸನ್ನು ಎದುರಿಸಬೇಕಾಗುತ್ತದೆ. ಕವಿ ಪ್ರೀತಿ ಇಲ್ಲದೇ ಪ್ರಕೃತಿಯ ಸಹಜ ಕ್ರಿಯೆಗಳು ಸಾಗಲು ಸಾಧ್ಯವಿಲ್ಲ ಎನ್ನುತ್ತಾನೆ. ಪ್ರೀತಿಯಿಂದ ಮಾತ್ರ ಮನುಷ್ಯನ ಮನಸ್ಸೆಂಬ ಮರಭೂಮಿಯಲ್ಲಿ ಹಸಿರು ಮೂಡಿಸಲು ಸಾಧ್ಯವಾಗುವುದು.

ಜಿಎಸ್ಎಸ್ ಅವರ ಬದುಕಿನಾನುಭವ ಅವರ ಕವಿತೆಯ ಶಕ್ತಿಯೂ ಹೌದು. ಮನುಷ್ಯನಿಗೆ ನಾನು ನನ್ನದು, ನನ್ನಿಂದಲೇ ಎಲ್ಲ ಎನ್ನುವ ಅಹಂ ಮತ್ತು ಅಹಂಕಾರ ಒಮ್ಮೆ ಮನದೊಳು ಹೊಕ್ಕಿತೆಂದರೆ ಅದರಿಂದ ಹೊರಬರುವುದು ತುಂಬಾ ಕಷ್ಟ. ಆ ಅಹಂನ್ನು ಮೀರು ಕ್ರಿಯೆಯನ್ನು ಇವರ ಕವಿತೆಗಳು ಮಾಡುತ್ತವೆ.

ಹಣತೆ ಹಚ್ಚುತ್ತೇನೆ ನಾನೂ
ಈ ಕತ್ತಲಿನಿಂದ ಬೆಳಕಿನ ಕಡೆಗೆ ನಡೆದೇನೆಂಬ
ಆಸೆಯಿಂದಲ್ಲ
ಕತ್ತಲಿನಿಂದ ಕತ್ತಲಿಗೇ ತಡಕಾಡಿಕೊಂಡು ಬಂದಿವೆ ಹೆಜ್ಜೆ
ಶತಮಾನಗಳಿಂದಲೂ

ಎನ್ನುವಲ್ಲಿ ಕವಿಗೆ ಮನುಷ್ಯ ಬದುಕಿನ ಬಗೆಗೆ ಸ್ಪಷ್ಟತೆ ಇದೆ. ಕತ್ತಲನ್ನು ಅಜ್ಞಾನವನ್ನು ನಾನು ಗೆಲ್ಲುತ್ತೇನೆಂಬ ಜಿದ್ದು ನನ್ನದಲ್ಲವೆಂದು ಸ್ಪಷ್ಟಪಡಿಸುತ್ತಲೇ ಹಚ್ಚಿದ ಹಣತೆ ಶಾಶ್ವತವಲ್ಲದಿದ್ದರೂ ನನಗೂ ಗೊತ್ತು ಈ ಕತ್ತಲಿಗೆ ಕೊನೆಯಿರದ ಬಾಯರಿಕೆ ಎನ್ನುವಲ್ಲಿ ಕೊನೆಯಿರದ ಕತ್ತಲು–ಬೆಳಕಿನ ಹೊಯ್ದಾಟದ ಬದುಕು ಎಷ್ಟೇ ಕ್ಷಣಿಕವಾದರೂ ಜೀವನಪ್ರೀತಿ ಮುಖ್ಯವೆಂದು ಕವಿ ಪ್ರತಿಪಾದಿಸುತ್ತಾನೆ.

ಆದರೂ ಹಣತೆ ಹಚ್ಚುತ್ತೇನೆ ನಾನು;

ಕತ್ತಲೆಯನ್ನು ದಾಟುತ್ತೇನೆಂಬ ಭ್ರಮೆಯಿಂದಲ್ಲ,
ಇರುವಷ್ಟು ಹೊತ್ತು ನಿನ್ನ ಮುಖ ನಾನು, ನನ್ನ ಮುಖ ನೀನು
ನೋಡಬಹುದೆಂಬ ಒಂದೇ ಒಂದು ಆಸೆಯಿಂದ
ಹಣತೆ ಆರಿದ ಮೇಲೆ ನೀನು ಯಾರೋ ಮತ್ತೆ
ನಾನು ಯಾರೋ

ಕವಿ ಹಚ್ಚುವ ಹಣತೆ ವಿಶ್ವವನ್ನೇ ಬೆಳಗುತ್ತದೆ ಎಂಬ ಭ್ರಮೆಯೂ ಇಲ್ಲ, ಮಹತ್ವಾಕಾಂಕ್ಷೆಯಾಗಲಿ ಇಲ್ಲ. ಹುಚ್ಚುವ ಹಣತೆಯ ಬಗ್ಗೆ ಹಲವರಿಗೆ ಹಲವು ಬಗೆಯ ನಿರೀಕ್ಷೆಗಳಿರುತ್ತವೆ. ಆದರೆ ಜಿಎಸ್ಎಸ್ ಅವರು ಹಚ್ಚುವ ಹಣತೆಯ ಕಾರಣವೇ ಬೇರೆ. ಬದುಕಿನ ನಿರೀಕ್ಷೆಗಳು ಹೇಗಿರಬೇಕು, ಆಸೆ, ಹಂಬಲಗಳು ಎಂತಿರಬೇಕು, ಬದುಕಿನ ರೀತಿಯಲ್ಲಿ ಜೀವನಪ್ರೀತಿಯೊಂದಿಗೆ ಹೇಗೆ ಬದುಕಬೇಕು ಎನ್ನುವ ಬಗ್ಗೆ ಕವಿ ಅರ್ಥಪೂರ್ಣವಾಗಿ ತಿಳಿಸಿದ್ದಾನೆ. 'ಇರುವಷ್ಟು ಕಾಲ ನನ್ನ ಮುಖ ನೀನು, ನಿನ್ನ ಮುಖ ನಾನು' ನೋಡುವ ಕ್ಷಣದಲ್ಲಿ ಬದುಕಬೇಕು, ಜೀವನ ಕ್ಷಣಿಕವಾದರೂ ಆ ಕ್ಷಣವನ್ನು ಪ್ರೀತಿಯಿಂದ ಜೀವಿಸಬೇಕೆಂದು ಕವಿಯ ಹಣತೆ ತಣ್ಣಗೆ ಉತ್ತರಿಸುತ್ತದೆ.

ಮನುಷ್ಯ ಮನುಷ್ಯನ ಮನಸ್ಸಿನ ಮಧ್ಯೆ ಗೋಡೆಗಳ ನಿರ್ಮಾಣಗೊಳ್ಳುತ್ತಿರುವ ಬಗ್ಗೆ ಕವಿಗೆ ಎಲ್ಲಿಲ್ಲದ ಸಂಕಟ ತಂದೊಡ್ಡಿದೆ.

ಒಂದೊಂದು ಸಲ ನನಗೂ ನಿನಗೂ ನಡುವೆ
ಇದ್ದಕ್ಕಿದ್ದಂತೆ ಗೋಡೆ ಏಳುತ್ತದೆ
ಎಲ್ಲಿಂದಲೋ ಏನೋ ಇಟ್ಟಿಗೆಯ ಮೇಲೆ ಇಟ್ಟಿಗೆ ಬಂದು
ಕೂತು, ಕೂತಲ್ಲಿಯೇ ನಮ್ಮನ್ನು ಹೂತು
ಸುತ್ತ ಗೋಡೆ ಕಟ್ಟುತ್ತವೆ.

ಮನುಷ್ಯ ಸಂಘಜೀವಿ. ಪರಸ್ಪರ ಅವಲಂಬನೆ ಸಹಕಾರ ಸಹಾನುಭೂತಿ, ಪ್ರೀತಿ ವಿಶ್ವಾಸಗಳೇ ಬದುಕಿನ ಮೂಲಾಧಾರವೆಂದು ನಂಬಿರುವ ಕವಿಗೆ ಮನುಷ್ಯ ಮನಸ್ಸಿನ ಪೂರ್ವಾಗ್ರಹ, ಅಹಂಕಾರ, ಅಸಹಿಷ್ಣುತೆಗಳಿಂದ ನಿರ್ಮಾಣವಾದ ಗೋಡೆಗಳನ್ನು ಒಡೆದು ಕಟ್ಟುವ ಹಂಬಲವಿದೆ. ಜಾತಿ, ಮತ, ಧರ್ಮ, ಭಾಷೆ, ಮನುಷ್ಯನ ಮಧ್ಯೆ ಗೋಡೆ ನಿರ್ಮಾಣಕ್ಕೆ ಕಾರಣವಾಗಿವೆ. ಕೂಡಿ ಬೆಳೆದ ತೋಟದ ಹೂವುಗಳು ಸುಟ್ಟು ಹೊಗೆಯಾಡುತ್ತಿವೆ. ಪರಸ್ಪರ ಗೌರವ ಬದಲು ಅಸಹನೆ ಮತ್ತು ದ್ವೇಷಗಳು ಅಧಿಕಗೊಳ್ಳುತ್ತಿವೆ. ಈ ಮನೋಭಾವ ಸಮಾಜದ ಶಾಂತಿ ಮತ್ತು ಸೌಹಾರ್ದತೆಯನ್ನು ಹಾಳುಗೆಡವುತ್ತಿವೆ ಎನ್ನುವ ನೋವು ಕವಿಗೆ ಕಾಡುತ್ತಲೇ ಅದಕ್ಕೆ ಪರ್ಯಾಯವಾಗಿ ಜೀವನಪ್ರೀತಿಯ ಹಂಬಲ ಹೆಚ್ಚಾಗಿದೆ.

ಕೋಳಿ ಕೂಗುವುದನ್ನು ಕೇಳುತ್ತಾ
ಗೋಡೆಯ ಆಚೆಗೆ ನೀನು
ಈಚೆಗೆ ನಾನು
ಗೋಡೆ ಕರಗುವುದನ್ನೇ ಕಾಯುತ್ತಾ
ಕೂರುತ್ತೇವೆ

ಕೋಳಿ ಕೂಗುವುದು ಸಹಜ ಪ್ರಕ್ರಿಯೆ, ಕೋಳಿ ಕೂಗನ್ನು ಆಚೆ ಈಚೆ ಗೋಡೆಯ ಬದಿಯಲ್ಲಿ ನಿಂತು ಗೋಡೆ ಕರಗುವ ಬಗ್ಗೆ ಕಾಯುವಿಕೆ ಕ್ರಿಯೆ ಇದೆ. ಆದರೆ ಅದಕ್ಕೆ ಗೋಡೆ ಸುಮ್ಮನೆ ಇದ್ದರೆ ಕರಗಲಾರದು. ಮನಸ್ಸನ್ನು ಬದಲಿಸಿ ಜೀವನಪ್ರೀತಿಯಲ್ಲಿ ಬದುಕನ್ನು ಕಟ್ಟಿಕೊಳ್ಳುವ ಸಹಾನುಭೂತಿ, ಸಹನೆ, ಪರಸ್ಪರ ಗೌರವ ಬೆಳೆಸಿಕೊಳ್ಳುತ್ತಾ ಭಿನ್ನತೆಯನ್ನು ಒಪ್ಪಿಕೊಳ್ಳುತ್ತಾ ಎಲ್ಲರನ್ನು ಸಮಾನವಾಗಿ ಕಾಣುವ ಬದುಕಿನ ಪ್ರೀತಿ ಎಲ್ಲರ ರೀತಿಯಾಗ ಬೇಕೆಂದು ಕವಿ ಬಯಸುತ್ತಾನೆ.

ಎಲ್ಲೋ ಹುಡುಕಿದೆ ಇಲ್ಲದ ದೇವರ
ಕಲ್ಲು ಮಣ್ಣುಗಳ ಗುಡಿಯೊಳಗೆ
ಇಲ್ಲೇ ಇರುವ ಪ್ರೀತಿ ಸ್ನೇಹವ
ಗುರುತಿಸದಾದೆನು ನಮ್ಮೊಳಗೆ

ಹೊರ ಜಗತ್ತಿನ ದೇವರ ಹುಡುಕಾಟಕ್ಕಿಂತ ಕವಿಗೆ ಮನುಷ್ಯ ಬದುಕಿನ ಪ್ರೀತಿ ಸ್ನೇಹಗಳು ಮುಖ್ಯವಾಗುತ್ತವೆ. ಅಮೂರ್ತ ರೂಪದ ದೇವರು ಭೌತಿಕ ಸ್ಥಾವರಗಳಲ್ಲಿಲ್ಲ ಮನದಂಗಳದಲ್ಲಿ, ಶುದ್ಧ ಪ್ರೀತಿಯಲ್ಲಿ, ದಯೆ ನಿಷ್ಠೆಯಲ್ಲಿ ದೇವರಿದ್ದಾನೆಂದು ಹೃದಯದೊಳಗಿನ ದೇವರನ್ನು ಪ್ರೀತಿ, ಸ್ನೇಹದ ರೂಪದಲ್ಲಿ ಗುರುತಿಸಬೇಕೆಂಬ ಧ್ಯೇಯ ಇವತ್ತಿನ ಜರೂರಿಯೂ ಹೌದು. ಅಂಧಭಕ್ತಿ ಮತ್ತು ಹೊರಗಿನ ಆಚರಣೆಗಳ ಬಗ್ಗೆ ಕವಿ ಧ್ವನಿ

ಎತ್ತುತ್ತಾನೆ. ದೇವರನ್ನು ಕಾಣಲು ಯಾತ್ರೆ ಮಾಡಬೇಕಿಲ್ಲ. ಮನಶುದ್ಧವಾಗಿರಿಸಿಕೊಂಡು ಜೀವನಪ್ರೀತಿಯ ನೆಲೆಯಲ್ಲಿ ಮಾನವೀಯ ಮೌಲ್ಯಗಳ ಅನುಸರಣೆಯಲ್ಲಿ ದೇವರಿದ್ದಾನೆ ಎನ್ನುತ್ತಾನೆ. ದೇವರು ಮತ್ತು ಜೀವನಪ್ರೀತಿಯ ಅವಿನಾಭಾವ ಸಂಬಂಧವನ್ನು ಕವಿ ಮುಖಾಮುಖಿಗೊಳಿಸುತ್ತಾನೆ.

ಕವಿ ತಾಯ್ತನದ ಪ್ರೀತಿಯನ್ನು ತಮ್ಮ ಅನೇಕ ಕವಿತೆಗಳಲ್ಲಿ ಶುದ್ಧತೆಯ, ನಿಸ್ವಾರ್ಥದ ದಿವ್ಯ ಬಾಂಧವ್ಯದ ಸಂಕೇತದ ಮೂಲಕ ಪ್ರತಿಪಾದಿಸುವ ರಚನೆಗಳಿವೆ.

ತಾಯಿಯ ಎದೆಹಾಲನು ಹೀರುತಿದೆ
ಮೋಹದ ಮುದ್ದಿನ ಮಗುವೊಂದು–
ಬಾನನಪ್ಪಿದ ಮೃದು ಮೋಡದವೋಲ್

ತಾಯಿ ಮಗುವಿನ ಪ್ರೀತಿಯಲ್ಲಿ ಯಾವುದೇ ಪ್ರತಿಫಲಾಪೇಕ್ಷೆಯ ನಿರೀಕ್ಷೆ ಇರುವುದಿಲ್ಲ. ತಾಯಿ ತನ್ನ ಎದೆಹಾಲನ್ನು ಕೊಡುವಾಗ ಮಗುವಿನ ಸ್ಥಿತಿಯನ್ನು ಬಾನನ್ನು ಮೃದು ಮೋಡ ಅಪ್ಪಿದಂತೆ ಎನ್ನುವ ಕವಿಗೆ ಮಗು ತಾಯಿಯನ್ನು ನಂಬುವ ಬಗೆ, ತಾಯಿ ಮಗುವಿನ ಸಂಬಂಧ ಕೇವಲ ಜೈವಿಕ ಮಾತ್ರವಲ್ಲ ಭಾವನಾತ್ಮಕ ಬಾಂಧವ್ಯವು ಆಗಿದೆ. ಈ ಸಂಬಂಧದಲ್ಲಿ ಯಾವುದೇ ಸ್ವಾರ್ಥವಿಲ್ಲವೆಂದು ಹೇಳುತ್ತಾ ತಾಯಿಯ ಪ್ರೀತಿಯ ಮಹತ್ವವೆಂದು ಕವಿ ಹೇಳುತ್ತಾನೆ.

ಹಾಲೂಡುತ್ತಿಹ ತಾಯಿಯ ಮನಸ್ಸು
ಮಗನಭ್ಯುದಯ ಕನಸಿನಲಿ
ಕಾಮನ ಬಿಲ್ಲಿನ ನಾಕವ ನೆಯ್ದಿರೆ
ಶಿಶು ತಾನದ್ದಿದೆ ಹಾಲಿನಲಿ
ತನ್ನ ತಾಯೊಲವನೆ ಹೀರುತಿದೆ
ಹಾಲೊಂದೇ ಅದಕ್ಕಿಂದಿಗೆ ಸತ್ಯ
ಮಿಕ್ಕಿದ್ದು ಏನಿದ್ದರು ಮಿಥ್ಯ

ಮಗುವಿನ ಅಭ್ಯದಯವನ್ನು ಬಯಸುವ ತಾಯಿ ಪ್ರೀತಿಗೆ ಜಗತ್ತಿನಲ್ಲಿ ಯಾವುದು ಸಮಾನವಿಲ್ಲ. ತಾಯಿ ಮಗುವಿನ ಪ್ರೀತಿಯಲಿ ಮಗು ಒಲವಿನ ಹಾಲನ್ನಿರುತಿದೆ ಎಂದು ಕವಿ ತಾಯ್ತನದ ಪ್ರೀತಿಯನ್ನು ಅಭಿವ್ಯಕ್ತಿಸಿದ್ದಾರೆ. ಮಗುವಿಗೆ ತಾಯಿಯ ಎದೆ ಹಾಲು ಕುಡಿಯುವುದು ಮಾತ್ರ ಸತ್ಯವಾಗಿ ಕಾಣುತ್ತದೆ, ಉಳಿದೆಲ್ಲವು ಮಿಥ್ಯವೆಂದು ಕವಿ ಹೇಳುತ್ತಾನೆ.

ಜಿಎಸ್ಎಸ್ ಅವರ ಕವಿತೆಗಳಲ್ಲಿ ಪ್ರಕೃತಿಪ್ರೀತಿ ಅಗಾಧವಾಗಿದೆ. ಪ್ರಕೃತಿ ಮನುಷ್ಯನ ಜೀವನಾಧಾರ. ಗಾಳಿ, ನೀರು, ಮರ, ಪಶು, ಪಕ್ಷಿ, ಮನುಷ್ಯ ಬದುಕನ್ನು ಹಸನುಗೊಳಿಸಿವೆ. ಪ್ರಕೃತಿಪ್ರೀತಿಯೆಂದರೆ ಅವುಗಳನ್ನು ಸಂರಕ್ಷಿಸುವುದು, ಕಾಪಾಡುವುದು ಎಂದರ್ಥ. ಪ್ರಕೃತಿಪ್ರೀತಿ ಮನಸ್ಸನ್ನು ಉಲ್ಲಾಸಿತಗೊಳಿಸುವ ಮೂಲಕ ಬದುಕಿನ ಅರ್ಥವನ್ನು ವಿಸ್ತರಿಸುತ್ತದೆ.

ಇಲ್ಲಿ ಮರದಡಿಯಲ್ಲಿ ಜನ ನಡೆವ ದಾರಿಯಲ್ಲಿ ಪುಡಿ ಪುಡಿಯಲ್ಲಿ ಹುಡಿಯಲ್ಲಿ ಹೊರಳುತಿದೆ ಹೂವು ಇಳೆಗುರುಳಿ ಬಿದ್ದರೂ ಮಣ್ಣಿನೊಳಗದ್ದರೂ ಇನಿತಿಲ್ಲ ನೋವು ಎನ್ನುವ ಕವಿ ಕೊನೆ ಸಾಲುಗಳಲ್ಲಿ ಹೀಗೆ ಹೇಳುತ್ತಾನೆ.

ಅಳುವು ನಗುವು ಕೂಡಿದರೆ
ಅದೆ ಮರ್ತ್ಯಲೋಕ
ಎಂಬ ತತ್ವನೊರೆವ ಸಿದ್ಧನಂತೆ
ಕಳಕಳಿಸುತಿದೆ ಹೊಮ ಮುನ್ನಿನಂತೆ

ಎನ್ನುವಲ್ಲಿ ಮಾನವೀಯ ಮತ್ತು ಪರಿಸರದ ನಡುವಿನ ಸಂಕೀರ್ಣತೆಯ ಸಂಬಂಧವನ್ನು ದರ್ಶಿಸುತ್ತದೆ.

ದಿಟವಿರಲಾರದು ಹೂ ತುಂಬಿದ ಮರ
ಯಾರದೊ ಮೋಡಿಯ ರೂಪವಿದು
ನಾಟಕ ಮುಗಿಯಲು ಮತ್ತೆ ಸಲ್ಲುವುದೊ
ಲೋಕದ ವಾಸ್ತವ ಮಣ್ಣಿಗಿದು?

ಪ್ರಕೃತಿ ಮತ್ತು ಮನುಷ್ಯ ಸಂಬಂಧಗಳ ನಿರ್ವಹಣೆಯಲ್ಲಿನ ತೊಡಕಿನ ಬಗ್ಗೆ ಕವಿ ಮಾತನಾಡುತ್ತಾನೆ. ಮಾನವ ಮತ್ತು ಪ್ರೀತಿಯೊಂದಿಗಿನ ಪರಸ್ಪರ ಸಾಮರಸ್ಯದ ಪ್ರಕ್ರಿಯೆಯನ್ನು ಬಿಂಬಿಸುತ್ತದೆ. ಸಾಲು ಸಾಲು ಮರಗಳ ಕೆಳಗೆ ನೆರಳೇ ಇಲ್ಲ. ಹೊಸ ನೆರಳು ಚಿಗುರುವ ತನಕ ಕಾಯಬೇಕು ಎನ್ನುವ ಹೊಸತನಕ್ಕೆ ಕಾಯುವಿಕೆಯ ಆಶಾಭಾವವನ್ನು ವ್ಯಕ್ತಪಡಿಸುತ್ತಾನೆ.

ದಟ್ಟ ಕತ್ತಲಿನ ಅಟ್ಟಹಾಸದ ನಡುವೆ
ದೀಪ ಹಚ್ಚುವುದು ನಿಜಕ್ಕೂ ತೀರ
ಕಷ್ಟದ ಕೆಲಸ ಆದರೂ ಬೇಕು ಕತ್ತಲು
ನಮಗೆ; ಈ ಮೂಲಭೂತಕ್ಕೆ
ಭಾಷ್ಯ ಬರೆವಂಥ ಅಷ್ಟಾವಕ್ರ
ಪ್ರಭೃತಿಗಳು ಅವತರಿಸಿ, ಯುಗಯುಗದಲ್ಲು
ಚಲಿಸುವುದು ಹೀಗೆಯೇ ಈ ಚರಿತ್ರೆಯ ಚಕ್ರ

ಈ ಮನುಷ್ಯ ಸಮಾಜದಲ್ಲಿ ಒಲವನ್ನು ಬಿತ್ತಿ ಬೆಳೆಯುವುದು ತುಂಬಾ ಕಷ್ಟದ ಕೆಲಸ. ದಟ್ಟ ಕತ್ತಲಿನಲ್ಲಿ ದೀಪ ಹಚ್ಚುವುದು ಅಷ್ಟೆ ಕಷ್ಟದ ಕಾರ್ಯ, ಅಂಧಕಾರದ ಪರದೆಯನ್ನು ಕಣ್ಣಿಗೆ ಎಳೆದುಕೊಂಡಿರುವ ಮನುಷ್ಯನಿಗೆ ಕಣ್ಣಮುಂದಿನ ಬೆಳಕು ಹರಡುವುದು ಪ್ರಾಯಾಸದಾಯಕವಾದರೂ ಸರಿ ಪ್ರೀತಿಯ ಮೂಲಕ ಹಣತೆ ಹಚ್ಚುವ ಪಣವನ್ನು ಕವಿ ತೊಡುತ್ತಾನೆ. ಚರಿತ್ರೆಯನ್ನು ಬದಲಾಯಿಸಲು ಪ್ರೀತಿಯಿಂದ ಮಾತ್ರ ಸಾಧ್ಯವೆಂಬ ಅರಿವನ್ನು ಕವಿ ಜಗಕ್ಕೆ ಸಾರುತ್ತಾನೆ.

**ಆಕರ ಗ್ರಂಥಗಳು**

1. ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪ, ಲೇಖಕರು: ಡಿ.ಎಸ್.ನಾಗಭೂಷಣ, ಅನ್ವೇಷಣೆ ಪ್ರಕಾಶನ ವಿಜಯನಗರ
2. ಕಾವ್ಯರ್ಥ ಚಿಂತನ, ಲೇಖಕರು: ಡಾ.ಜಿ.ಎಸ್. ಶಿವರುದ್ರಪ್ಪ, ಪ್ರಿಯದರ್ಶಿನಿ ಪ್ರಕಾಶನ ಬೆಂಗಳೂರು
3. ಜಿ.ಎಸ್. ಶಿವರುದ್ರಪ್ಪ ಸಂಚಯ, ಸಂ: ಎಚ್.ಎಸ್.ವೆಂಕಟೇಶ ಮೂರ್ತಿ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಬೆಂಗಳೂರು.